ಕೇಳಿದ್ದೀರಿ. ಇವರು ಗಮನ ಸೆಳೆಯುವ ಸೂಚನೆ ಕೇಳಿದ್ದಾರೆ. ಅಲ್ಲಿ ನಿಮ್ಮ ಡಿಬೆಟ್ ಆಗುತ್ತದೆ ಇಲ್ಲಿ ಆಗುವುದಿಲ್ಲ.

ಶ್ರೀ ವೈ. ಕೆ. ರಾಮಯ್ಯ : ಪ್ರಸ್ತಾವನೆ ಇಲ್ಲೂ ಆಗುತ್ತದೆ, ಅಲ್ಲೂ ಆಗುತ್ತದೆ ಅಲ್ಲವೇ?

ಅಧ್ಯಕ್ಷರು : ಪ್ರಸ್ತಾವನೆಯಾದರೆ ಎಲ್ಲಾ ವಿಷಯ ಪ್ರಸ್ತಾವನೆ ಮಾಡುತ್ತಾರೆ. ಪ್ರಸ್ತಾವನೆಯೊಳಗೆ ಬೇರೆ ಬೇರೆ ಇದೆಯಲ್ಲ. ಗಮನ ಸೆಳೆಯುವ ಸೂಚನೆಯಲ್ಲಿ ಅವರು ಒಂದು ಸ್ಟೇಟ್‌ಮೆಂಟ್ ಕೊಡುತ್ತಾರೆ ಬಹಳ ಎಂದರೆ ಒಂದು ಪ್ರಶ್ನೆ ಮಾತ್ರ ಕೇಳಬಹುದು.

ಶ್ರೀ ವೈ.ಕೆ. ರಾಮಯ್ಯ : ಈ ಸದನದಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನಕ್ಕಿಂತಲೂ ಅಬಕಾರಿ ಚರ್ಚೆಯ ಅವಶ್ಯಕತೆಯೇ ತಮ್ಮ ತೀರ್ಮಾನ ಎಂದು ನಾನು ತಿಳಿದುಕೊಳ್ಳಬಹುದೇ?

ಅಧ್ಯಕ್ಷರು : ಅದು ತಮ್ಮ ಅಭಿಪ್ರಾಯ.

ವಿಷಯ : ರಾಜ್ಯದ ಪ್ರತಿ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ. ಮಂತ್ರಿಗಳ ಹೇಳಿಕೆ.

* ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ, ಈ ಸದನದಲ್ಲಿ ಇಲ್ಲದೇ ವಿಧಾನ ಪರಿಷತ್ತಿನಲ್ಲಿ ಉತ್ತರ ಕೊಡುತ್ತಾ ಇದ್ದ ಸಮಯದಲ್ಲಿ, ಇಲ್ಲಿ ಔರಾದ್ ತಾಲ್ಲೂಕಿನ ಬಗ್ಗೆ ಶೂನ್ಯ ವೇಳೆಯಲ್ಲಿ ಒಂದು ಪ್ರಶ್ನೆ ಬಂತು ಹಾಗೂ ಅದರ ಜೊತೆಯಲ್ಲೇ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಕುಡಿಯುವ ನೀರಿನ ಬಗ್ಗೆ ಗಂಭೀರವಾದಂತಹ ಪ್ರಶ್ನೆ ಬಂದಿತೆಂದು ಹಾಗೂ ಅದಕ್ಕೆ ಕೆಲವು ವಿವರಗಳನ್ನು ಹೇಳಿಕೆಯ ಮೂಲಕ ಕೊಡುವುದು ಸೂಕ್ತ ಎಂದು ನಮ್ಮ ಕಾನೂನು ಮಂತ್ರಿಗಳು ಸೂಚಿಸಿದರು. ಆ ಹೇಳಿಕೆಯನ್ನು ನಾನು ಈಗ ಕೊಡುತ್ತಿದ್ದೇನೆ. ಪ್ರಥಮವಾಗಿ ಔರಾದ್ ತಾಲ್ಲೂಕಿನ ಬಗ್ಗೆ ನನ್ನ ಹತ್ತಿರ ಏನು ಮಾಹಿತಿ ಇದೆ ಅದನ್ನು ಸದನದ ಮುಂದೆ ಇಡಬೇಕಾಗುತ್ತದೆ. ಈ ಔರಾದ್ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎನ್ನುವುದು ನಮಗೆ ಗೊತ್ತಿದೆ. ಹಾಗೂ ಹೋದ ವರ್ಷ ಈ ತಾಲ್ಲೂಕಿನಲ್ಲಿ 114 ಕೆಲಸಗಳನ್ನು ಕಾರ್ಯಗತ ಮಾಡಲಿಕ್ಕೆ ತೆಗೆದುಕೊಂಡು ಅದರಲ್ಲಿ 100 ವರ್ಕ್ಸನ್ನು ಈಗಾಗಲೇ ಪೂರ್ತಿ ಮಾಡಿದ್ದೇವೆ. 114 ಕೆಲಸಗಳಿಗೆ 41 ಲಕ್ಷ ವೆಚ್ಚ ತಗಲುತ್ತದೆ. ಅದರಲ್ಲಿ ನೂರು ಕೆಲಸವನ್ನು ಈಗಾಗಲೇ ಪೂರ್ಕೆಸಿದ್ದೇವೆ. ಮುಂಬರುವ 93-94ನೇ ವರ್ಷದಲ್ಲಿ ಇಲ್ಲಿ 7-85 ಲಕ್ಷ ರೂಪಾಯಿಯ ಕಾರ್ಯಕ್ರಮ ಮಾಡುತ್ತಿದ್ದೇವೆ. ಔರಾದ್ ತಾಲ್ಲೂಕಿನಲ್ಲಿ 19 ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಎಂದು ನಮ್ಮ ಗಮನಕ್ಕೆ ಬಂದಿದೆ. ಬೀದರ್ ಡಿಸ್ಟ್ರಿಕ್ಟ್‌ನ 5 ತಾಲ್ಲೂಕುಗಳ 88 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಈಗ ನಾವು ಇಡೀ ಕರ್ನಾಟಕದಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಏನಿದೆ ಅದರ ಹಿನ್ನೆಲೆಯನ್ನು ನೋಡಬೇಕು, ಎಂದು ನಾನು ಸೂಚಿಸುತ್ತಿದ್ದೇನೆ. ಇದರ ಬಗ್ಗೆ ನಾನು ಸಂಕ್ಷಿಪ್ತವಾಗಿ ಇತಿಹಾಸ ಕೊಟ್ಟರೂ ತಪ್ಪಾಗುವುದಿಲ್ಲ. ನಾವು ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರಿನ ಸಮಸ್ಯೆಯನ್ನು ಏನು ಎದುರಿಸುತ್ತಿದ್ದೇವೆ ಇದಕ್ಕೆ ಸುಮಾರು 20 ವರ್ಷದ ಇತಿಹಾಸ ಇದೆ. 1972ರಲ್ಲಿ ಕರ್ನಾಟಕ ರಾಜ್ಯ ಏನು ಭಾರೀ ಬರಗಾಲವನ್ನು ಎದುರಿಸಬೇಕಾಯಿತು. ಆಗ ನಾನು ಹಣಕಾಸಿನ ಮಂತ್ರಿಯಾಗಿದೆ. ನನಗೆ ಗೊತ್ತಿದೆ ಆಗ ನಾವು ಕೊಳವೆ ಬಾವಿಗಳನ್ನು ಹೆಚ್ಚುಹೆಚ್ಚಾಗಿ ತಂದು,

ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿಗೋಸ್ಕರ ಉಪಯೋಗ ಮಾಡಲಿಕ್ಕೆ ಪ್ರಾರಂಭ ಮಾಡಿದ್ದೆವು. ಆಗ ಕರ್ನಾಟಕದಲ್ಲಿ ಸಾಕಷ್ಟು ಕೊಳವೆ ಬಾವಿಗಳು ಇರಲಿಲ್ಲ.

ನಮ್ಮ ಚೀಫ್ ಇಂಜಿನಿಯರ್‌ಗಳನ್ನು ಕಳುಹಿಸಿ ಸಿಕ್ಕಿದ ಕಡೆಗಳಿಂದ ತರಿಸುತ್ತಿದ್ದೆವು. ಈ ರೀತಿ ಮಾಡಿದ ನಂತರ 80ನೇ ಇಸವಿಯಲ್ಲಿ ಕೊಳವೆ ಬಾವಿಗಳ ಮುಖಾಂತರ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರವನ್ನು ಕೊಡತಕ್ಕ ಕಾರ್ಯಕ್ರಮವನ್ನು ನಾವು ಹೆಚ್ಚು ಮಾಡುವುದಕ್ಕೆ ಸಾಧ್ಯವಾಯಿತು. ಮಾನ್ಯ ನಜೀರ್ ಸಾಬರವರು ಇದ್ದಾಗ ಅದರ ಬಗ್ಗೆ ಭಾರಿ ಆಸಕ್ತಿಯನ್ನು ತೋರಿಸಿದರು. ಹಿಂದೆ 2 ಸಾರಿ ಸರ್ವೆ ಕಾರ್ಯ ನಮ್ಮ ಕರ್ನಾಟಕ ರಾಜ್ಯದಲ್ಲಿ ನಡೆಯಿತು. 80 ಮತ್ತು 85ನೇ ಇಸವಿಯಲ್ಲಿ ನಡೆಯಿತು. ನಮ್ಮ ಕರ್ನಾಟಕ ರಾಜ್ಯದಲ್ಲಿ 27 ಸಾವಿರ ಹಳ್ಳಿಗಳಿವೆ. 25 ಸಾವಿರ ಹ್ಯಾಮ್ಲೆಟ್ಸ್ ಇವೆ. ಅಂದರೆ, ಒಟ್ಟು 52 ಸಾವಿರ ಹೆಬಿಟೇಷನ್ಸ್ ಇವೆ. 80 ನೇ ಇಸವಿಯಲ್ಲಿ ಏನು ನಡೆಯಿತೆಂದರೆ, 27 ಸಾವಿರ ಹಳ್ಳಿಗಳ ಪೈಕಿ 20 ಸಾವಿರ ಹಳ್ಳಿಗಳು ಸಮಸ್ಯಾತ್ಮಕ ಹಳ್ಳಿಗಳೆಂದು ಆ ಸರ್ವೆಯಿಂದ ತೀರ್ಮಾನಕ್ಕೆ ಬಂತು. 85ನೇ ಇಸವಿಯಲ್ಲಿ 25 ಸಾವಿರ ಹ್ಯಾಮ್ಲೆಟ್ಸಿನ ಪಟ್ಟಿ ಏನಿದೆ ಅದರಲ್ಲಿ 17 ಸಾವಿರ ಹ್ಯಾಮ್ಲೆಟ್ಸ್ ಸಮಸ್ಯಾತ್ಮಕ ಹಳ್ಳಿಗಳೆಂದು ನಿಗದಿಯಾಯಿತು. ಅಂದರೆ 52 ಸಾವಿರ ಹೆಬಿಟೇಷನ್ಸ್ ಪೈಕಿ 35 ಸಾವಿರ ಹಳ್ಳಿಗಳು ಸಮಸ್ಯಾತ್ಮಕ ಹಳ್ಳಿಗಳೆಂದು ನಿಗದಿಯಾಯಿತು. ಇದರಲ್ಲಿ ಒಂದು ಕ್ವೆಟೀರಿಯ ಇಟ್ಟರು. ಒಂದು ಹಳ್ಳಿಗೆ ಕನಿಷ್ಟ ಪಕ್ಷ ಒಂದು ಸೋರ್ಸ್ ಆಫ್ ಡ್ರಿಂಕಿಂಗ್ ವಾಟರನ್ನು 1.5 ಕಿ.ಮಿ.ನೊಳಗೆ ಕೊಡಬೇಕೆಂದು ಅದರ ಪ್ರಕಾರ ನಾವು ಸಾಕಷ್ಟು ಕೊಳವೆ ಬಾವಿಗಳನ್ನು ಉಪಯೋಗಿಸಿ ಕರ್ನಾಟಕದ ಎಲ್ಲಾ 52 ಸಾವಿರ ಹಳ್ಳಿಗಳಿಗೂ ಒಂದು ಸೋರ್ಸ್ ಅದರೂ 1.5 ಕಿ.ಮಿ.ನೊಳಗೆ ಕೊಟ್ಟಿದ್ದೇವೆ. ಈ ಲೆಕ್ಕದ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 4 ಹಳ್ಳಿಗಳಲ್ಲಿ ಮಾತ್ರ ಈ ಸಮಸ್ಯೆ ಇದೆ. ಅಲ್ಲಿ ನೀರು ಸಿಕ್ಕಿಲ್ಲವೆಂದು ತಿಳಿದು ಬಂದಿದೆ. ಹಿಂದೆ ನಾನು ರೂರಲ್ ಡೆವಲಪ್‌ಮೆಂಟ್ ಮಂತ್ರಿಯಾಗಿದ್ದಾಗ ಹೇಳಿದ್ದೆ, ನಾನು ಈ ವರದಿಯನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನನ್ನ ಅನುಭವದಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಬಹಳ ತೊಂದರೆ ಇದೆ. ಬೇಸಿಗೆಯಲ್ಲಿ ಇನ್ನೂ ಭಾರಿ ತೊಂದರೆಯಾಗುತ್ತದೆ. ಅಷ್ಟೇ ಅಲ್ಲ, ಬೇರೆ ಕಾಲದಲ್ಲೂ ತೊಂದರೆ ಆಗಬಹುದು. ಆದ್ದರಿಂದ ಈ ತೀರ್ಮಾನವನ್ನು ನಾನು ಒಪ್ಪುವುದಿಲ್ಲ. ನಾವು ಹೊಸದಾಗಿ ನಮ್ಮ ಕರ್ನಾಟಕದಲ್ಲಿ ಐಡೆಂಟಿಫಿಕೇಷನ್ ಕೆಲಸ ಮಾಡುತ್ತೇವೆಂದು ಪ್ರಾರಂಭ ಮಾಡಿದೆವು. ಈಗ ಪುನಃ ನಾನು ಈ ಖಾತೆಯ ಮಂತ್ರಿಯಾಗಿ ಈ ವಿಚಾರವನ್ನು ತೆಗೆದುಕೊಂಡು ರೀಸರ್ವೆ ಕಾರ್ಯವನ್ನು ಮಾಡುತ್ತೇನೆ. ಈಗಾಗಲೇ ಇದರ ಬಗ್ಗೆ ನಾವು ಆದೇಶವನ್ನು ಕೊಟ್ಟಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಜಿಲ್ಲಾ ಪರಿಷತ್ತುಗಳ ಚೀಫ್ ಸೆಕ್ರೆಟರಿಯವರನ್ನೂ ಕರೆಸಿಕೊಂಡು ಯಾವ ರೀತಿ ಐಡೆಂಟಿಫೈ ಮಾಡಬೇಕೆಂದು ಚರ್ಚೆ ಮಾಡುತ್ತೇವೆ. ನಾನು ಕಂಪ್ಯೂಟರ್ ಸರ್ವೆ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಏಕೆಂದರೆ ; ನಾವು ಯಾವ ರೀತಿ ಕಂಪ್ಯೂಟರ್ ವಿಷಯವನ್ನು ಫೀಡ್ ಮಾಡುತ್ತೇವೆ ಅದೇ ರೀತಿ ಅದು ಮತ್ತೆ ನಮಗೆ ಉತ್ತರ ಕೊಡುತ್ತದೆ. ಇದರ ಬಗ್ಗೆ ಮಾನ್ಯ ಸದಸ್ಯರಿಂದ ಸಲಹೆ ಸೂಚನೆಗಳು ಬೇಕು. ಈ ಸದನದಲ್ಲಿ ಮತ್ತು ಹೊರಗಡೆ ನನ್ನ ಛೇಂಬರ್‌ನಲ್ಲಿ ಕೂಡ ನಡೆಯಲಿ . ನನ್ನ ಅನುಭವದ ಪ್ರಕಾರ ಬೇರೆ ಬೇರೆ ಕಡೆಗಳಿಂದ ನೀರನ್ನು ತರುವಂಥ ಪರಿಸ್ಥಿತಿ ಬಂದಿದೆ. ಅಂದರೆ ಇರಿಗೇಷನ್ ಹಳ್ಳದಿಂದ ಅಥವಾ ಪ್ರೈವೇಟ್ ಬಾವಿಗಳಿಂದ ತರಬೇಕಾಗುತ್ತದೆ. ವಿಶೇಷವಾಗಿ ಬೇಸಿಗೆಯಲ್ಲಿ ತರಬೇಕಾಗುತ್ತದೆ. ಆದರೆ ಇದು ಸಮಸ್ಯಾತ್ಮಕ ಹಳ್ಳಿ ಎಂದು ಒಪ್ಪಿಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿರಬೇಕು. ಏಕೆಂದರೆ

ಸಮಸ್ಯೆ ಸ್ಪಷ್ಟವಾಗಿ ಕಾಣಿಸುತ್ತದೆ. ಅಲ್ಲಿ ನಾವು ಸಾಕಷ್ಟು ನೀರನ್ನು ಕೊಟ್ಟಿದ್ದರೆ ಬೇರೆ ಕಡೆಯಿಂದ ನೀರನ್ನು ತರುವಂಥ ಅವಶ್ಯಕತೆ ಇರುತ್ತಿರಲಿಲ್ಲ.

12.50 ಪಿ. ಎಂ.

ಎರಡನೆಯದಾಗಿ, ನೀರು ಇದ್ದರೂ ಕೂಡ ಅದು ಬ್ರೀಕೇಜ್ ವಾಟರ್ ಇರಬಹುದು. ಕುಡಿಯಲಿಕ್ಕೆ ಅದು ಯೋಗ್ಯವಾಗಿ ಇರಲಿಕ್ಕೂ ಇಲ್ಲ ಎನ್ನುವುದು ಒಂದು ಪ್ರಶ್ನೆ ಇದೆ. ಮತ್ತೆ ಬೇರೆ ಬೇರೆ ಕ್ವೋಲೈಡ್ ಆಫ್ ಎಂದು ಇದೆಲ್ಲಾ ತಮಗೆ ಗೊತ್ತಿದೆ. ಈ ಒಂದು ಕೆಲವು ಟೆಕ್ನಿಕಲ್ ಸೈಂಟಿಫಿಕ್ ಬೇಸಿಸ್ ಮೇಲೆ ಪ್ರಾಬ್ಲಮ್ಯಾಟಿಕ್ ಎಂದು ನಮಗೆ ಅನುಭವ ಕೂಡ ಇದೆ. ಬೇಸಿಗೆಯಲ್ಲಿ ಏನಾಗುತ್ತದೆಂದು ಹೇಳಿದರೆ, ಹೋದವರ್ಷ ಏನಾಯಿತು ಅದಕ್ಕೆ ಮುಂಚಿನ ವರ್ಷ ಏನಾಯಿತು ಅದರ ಅನುಭವದ ಆಧಾರದ ಮೇಲೆ, ಈ ಪ್ರಾಬ್ಲಮ್ಯಾಟಿಕ್ ವಿಲೇಜ್ ಮತ್ತು ಅದರಲ್ಲಿ ಪ್ರಿಯಾರಿಟಿ ಫಿಕ್ಸ್ ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಿ ನನ್ನ ವಿಚಾರ ಇದೆ . ಈ ಕೆಲಸ ತಕ್ಷಣ ಮಾಡಬೇಕು. ಇದಕ್ಕೆ ತಿಂಗಳುಗಟ್ಟಲೆ ಬೇಕಾಗುವುದಿಲ್ಲ. ನಾವು ಅವರನ್ನು ಕರೆಯಿಸಿ ವಿಷಯ ಸ್ಪಷ್ಟವಾಗಿ ಹೇಳಿಬಿಟ್ಟರೆ , ಇನ್ನು ಒಂದೆರಡು ವಾರಗಳಲ್ಲಿ ಅದನ್ನು ಪೂರೈಸಲಿಕ್ಕೆ ಸಾಧ್ಯವಾಗುತ್ತದೆ. ಆನಂತರ, ನಾವು ಪ್ರಿಯಾರಿಟಿ ಬೇಸಿಸ್ ಮೇಲೆ ರಿಗ್ಸ್ ಅನ್ನು ಯಾವ ಯಾವ ಹಳ್ಳಿಗಳಲ್ಲಿ ಬೇಕೋ ಆ ಹಳ್ಳಿಗಳಲ್ಲಿ ಉಪಯೋಗಿಸಬೇಕಾಗುತ್ತದೆ. ಈಗ ನಮಗೆ ಕರ್ನಾಟಕದಲ್ಲಿರತಕ್ಕಂಥಾದ್ದು 76 ರಿಗ್ಸ್‌ಗಳು ಮಾತ್ರ. ಈ ಬೋರ್‌ವೆಲ್‌ಗೋಸ್ಕರ ಉಪಯೋಗಮಾಡುವಂಥಾದ್ದು 76 ರಿಗ್ಸ್‌ಗಳು. ಇತ್ತೀಚೆಗೆ ನಾವು ಇನ್ನು 15 ರಿಗ್ಸ್‌ಗಳನ್ನು ಹೊಸದಾಗಿ ಕೊಂಡುಕೊಳ್ಳುವಂಥಾ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಒಂದೊಂದು ರಿಗ್‌ಗೆ 30-40 ಲಕ್ಷ ರೂಪಾಯಿ ಆಗಬಹುದು. ಮೇಜರ್ ಡಿಸಿಷನ್ ತೆಗೆದುಕೊಂಡು ಕ್ಯಾಬಿನೆಟ್ಟಿನಲ್ಲಿ ಅದನ್ನು ಪಾಸ್ ಮಾಡಿದ್ದೇವೆ. ಮತ್ತೆ 76 ರಿಗ್ಸ್ ಅಲ್ಲದೆ, ಇನ್ನು 15 ರಿಗ್ಸ್ ಬರುತ್ತವೆ. ಅದು ಬಂದಾಗ ನಾವು ರಿಗ್ಸ್ ನ್ನು ಎಲ್ಲಿ ಯಾವ ಹಳ್ಳಿಯಲ್ಲಿ ನೀರು ಹುಡುಕುವ ಅವಶ್ಯಕತೆ ಇದೆಯೋ ಅಂಥ ಕಡೆ ಕಳುಹಿಸಿಕೊಡಬೇಕಾಗುತ್ತದೆ. ತಮಗೆ ಗೊತ್ತಿದೆ ಎಷ್ಟೋ ಕಡೆ 10-20 ರಿಗ್ಸ್ ಹಾಕಿದ್ದೇವೆ. ಇನ್ನು ಕೆಲವು ಕಡೆ 2 ರಿಗ್ಸ್ ಕೂಡ ಇಲ್ಲ. ಇಲ್ಲಿಯೂ ಕೂಡ ಒಂದು ಅಸಮಾನತೆ ಇದೆ. ಈಗ ವಾಟರ್ ಟೇಬಲ್ ಏನಿದೆ ಆ ವಾಟರ್ ಟೇಬಲ್ ಬಗ್ಗೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ವಾಟರ್ ಟೇಬಲ್ ಬಗ್ಗೆ ಹೇಳುವುದಕ್ಕೆ ಮುಂಚೆ ಫೇಲ್ಯೂರ್ ಆಗಿರುವುದನ್ನು ನಾನು ಆಗಲೇ ನನ್ನ ಉತ್ತರದಲ್ಲಿ ಹೇಳಿದ್ದೇನೆ. ಒಂದು ಲಕ್ಷ 24 ಸಾವಿರ ಬೋರ್‌ವೆಲ್‌ಗಳು ಹಾಲಿ ಏನಿವೆ, ಇದರಲ್ಲಿ ಸುಮಾರು 10 ಪರ್‌ಸೆಂಟ್ ಫೇಲ್ ಆಗಿದೆ. ಮತ್ತೆ ಇನ್ನು ಬೇಕಾದಷ್ಟು ಬಾವಿಗಳಲ್ಲಿ ವಾಟರ್ ಟೇಬಲ್ ಕಡಿಮೆಯಾಗಿ ತೊಂದರೆಯಾಗಿದೆ. ಬೋರ್‌ವೆಲ್ ಇದ್ದರೂ ಕೂಡ ಬೇಸಿಗೆ ಕಾಲದಲ್ಲಿ ತೊಂದರೆಯಾಗುತ್ತಿದೆ. ಅಲ್ಲದೇ ಬೇರೆ ಕಾಲಕ್ಕೂ ಕೂಡ ತೊಂದರೆಯಾಗುತ್ತಿದೆ. ಅದಕಾರಣ, ಬೇಸಿಗ ಕಾಲದಲ್ಲಿ ತೊಂದರೆಯಾಗತಕ್ಕಂಥ ಹಳ್ಳಿಗಳಲ್ಲಿ ಟೆಂಪರರಿ ವಾಟರ್ ಟೇಬಲ್ ಡಿಫಿಕಲ್ಟಿ, ಇದು ಪರ್ಮನೆಂಟ್ ಆಗಿ ಇರಬಹುದು. ತಾವು ಹೇಳಿದಂತೆ ಸ್ಯಾಚ್ಯುರೇಷನ್ ಪ್ರಾಬ್ಲಂ ಇದೆ. ಬಹಳಷ್ಟು ಬೋರ್‌ವೆಲ್‌ಗಳನ್ನು ಒಂದೇ ತಾಲ್ಲೂಕಿನಲ್ಲಿ ಹತ್ತಿರ ಹತ್ತಿರ ಹಾಕಿದರೆ, ವಾಟರ್ ಕಾಂಪಿಟೇಷನ್ ಬಂದು ನಮಗೆ ಜಾಸ್ತಿ ನೀರು ಸಿಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ಇದು

ಬಂದಿರಬಹುದು. ಬಹಳ ಮುಖ್ಯವಾಗಿ ಸಮಸ್ಯಾತ್ಮಕ ಹಳ್ಳಿಗಳು, ನೀರು ಕಡಿಮೆ ಇರತಕ್ಕಂಥ ಹಳ್ಳಿಗಳಲ್ಲಿ ಎನ್‌ಆರ್‌ಡಬ್ಲ್ಯುಎಸ್, ಎಆರ್‌ಡಬ್ಲ್ಯುಎಸ್, ಅಥವಾ ಎಂಡಬ್ಲ್ಯುಎಸ್ ಯೋಜನೆ ಅಡಿಯಲ್ಲಿ ಸರ್ಕಾರದವರು ಕಷ್ಟಪಟ್ಟು ಒಂದು ಬೋರ್‌ವೆಲ್ ಹಾಕಿಸಿದ್ದರೆ, ಅಲ್ಲಿ ಏನು ಮಾಡುತ್ತಾರೆಂದರೆ, ಅದರ ಪಕ್ಕದಲ್ಲಿಯೇ ಜಮೀನು ಇರತಕ್ಕಂಥ ಒಬ್ಬ ಖಾಸಗಿಯವನು ಅವನು ಸಹಿತ ಒಂದು ಬೋರ್‌ವೆಲ್ ಹಾಕಿಬಿಡುತ್ತಾನೆ. ಹೀಗಾಗಿ ಅನೇಕ ಕಡೆಗಳಲ್ಲಿ ಎಂ.ಡಬ್ಲ್ಯು.ಎಸ್, ಎನ್.ಆರ್.ಡಬ್ಲ್ಯು.ಎಸ್, ಎ.ಆರ್.ಡಬ್ಲ್ಯು.ಎಸ್‌ನಿಂದ ತೆಗೆದಂಥ ಬೋರ್‌ವೆಲ್‌ಗಳು ಸಹಿತ ಫೇಲ್ ಆಗಿವೆ. ಅದಕ್ಕೋಸ್ಕರ ನಾನು ತಮ್ಮನ್ನು ಅಭಿನಂದಿಸುತ್ತೇನೆ, ಈ ಪ್ರಾಬ್ಲಮ್ ಸಾಲ್ವ್ ಮಾಡಲು ವಿಲೇಜಸ್ ಬಗ್ಗೆ ಸರ್ವೆ ಮಾಡಿರುವ ಸುಮಾರು 6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸುಮಾರು 15 ರಿಗ್‌ಗಳನ್ನು ತೆಗೆದುಕೊಂಡಿದ್ದಕ್ಕೆ ನಾನು ನಿಜವಾಗಿಯೂ ಅಭಿನಂದಿಸುತ್ತೇನೆ. ಇವತ್ತು ಮಾನ್ಯ ಮಂತ್ರಿಗಳನ್ನು, ಸರ್ಕಾರವನ್ನು ನಾನು ಏನು ಒತ್ತಾಯ ಮಾಡುತ್ತೇನೆಂದರೆ ಈ ವಾಟರ್ ಟೇಬಲ್ ಬಹಳ ಕಡಿಮೆಯಾಗಿದೆ, ನಾವು ಇದೇ ರೀತಿ ಪಂಕ್ಚರ್ ಮಾಡುತ್ತಾ ಹೋದರೆ ಈಗ ಇರತಕ್ಕಂಥ ಒಂದೂವರೆ ಲಕ್ಷ ಬೋರ್‌ವೆಲ್‌ಗಳು ಫೇಲ್ ಆಗುತ್ತದೆ. ಆದ್ದರಿಂದ ತಾವು ಒಂದು ಬೋರ್‌ವೆಲ್‌ಗೂ ಮತ್ತೊಂದು ಬೋರ್‌ವೆಲ್‌ಗೂ ಇರತಕ್ಕಂಥ ಡಿಸ್ಟೆನ್ಸ್ ಬಗ್ಗೆ ಒಂದು ಕಾನೂನನ್ನು ಮಾಡಬೇಕೆಂದು ಹೇಳಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : ಒಳ್ಳೆಯ ಸೂಚನೆ ಇದೆ.

ಶ್ರೀ ಕೆ. ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೆ , 15-20 ವರ್ಷಗಳ ಹಿಂದೆ 25-30 ಅಡಿ ಬಾವಿ ತೆಗೆದರೆ ಸೊಗಸಾಗಿ ಕುಡಿಯುವ ನೀರು ಸಿಗುತ್ತಿತ್ತು. ಆಮೇಲೆ ಮಳೆ ಕಡಿಮೆ ಆಯಿತು . ಎಲ್ಲದಕ್ಕಿಂತ ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಇದ್ದ ಕೆರೆಕಟ್ಟೆಗಳಲ್ಲಿ ಹೂಳು ತುಂಬಿ ನೀರು ಹಿಡಿಯುವ ಕೆಪಾಸಿಟಿ ಕಡಿಮೆ ಇದೆ. ಕಡಿಮೆಯಾಗಿ ಬೇಸಿಗೆಯಲ್ಲಿ ಒಣಗಿ ಹೋಗುತ್ತದೆ. ಆದರಿಂದ ವಾಟರ್ ಟೇಬಲ್ ಕೆಳಗೆ ಹೋಯಿತು. ಇವರು ಎಷ್ಟು ಬೋರ್‌ವೆಲ್ ಹಾಕಿದರೂ ಕೆಳಗೆ ಹೋಗುತ್ತಿರುತ್ತದೆ. ಅದಕ್ಕೆ ಏನು ಮಾಡಬೇಕೆಂದರೆ, ಸೆಂಟ್ರಲ್ ಗವರ್ನ್‌ಮೆಂಟಿನ ಹೊಸ ಯೋಜನೆ ಬಂದಿದೆ ಎಂದು ಕೇಳಿದ್ದೇನೆ. ವಾಟರ್ ಟೇಬಲ್ ಮೇಲೆ ಬರುವಂತ ಸೆಂಟ್ರಲ್ ಗವರ್ನ್‌ಮೆಂಟಿನವರು ಸ್ಕೀಂ ಹಾಕಿ ಕರ್ನಾಟಕ ರಾಜ್ಯದಲ್ಲಿ 3-4 ಕಡೆ ಎಕ್ಸ್‌ಪೆರಿಮೆಂಟಲ್ ಪ್ರಯತ್ನ ಮಾಡುತ್ತಿದ್ದಾರೆಂದು ಕೇಳಿದೆ; ಅದು ಬಂದು ಒಂದು ವರ್ಷವಾಯಿತು. ಅದು ಸಕ್ಸಸ್ ಆಗಿದೆಯೇ ನೋಡಿ, ತಾವು ಎರಡು ಕೆಲಸ ಮಾಡಬೇಕು, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕೆರೆಕಟ್ಟೆಗಳ ಹೂಳನ್ನು ತೆಗೆದು ಹೆಚ್ಚು ನೀರು ಹಿಡಿಯುವಂತೆ ಮಾಡಬೇಕು ಮತ್ತು ಕೇಂದ್ರ ಸರ್ಕಾರದಿಂದ ವಾಟರ್ ರೀಚಾರ್ಜ್ ಆಗುವಂಥ ಸ್ಕೀಂ ಏನು ತಂದಿದ್ದಾರೆ ಅದು ಫಲದಾಯಕವಾಗಿದೆಯೇ ಎಂದು ನೋಡಿ ಅದನ್ನು ಇಡೀ ಕರ್ನಾಟಕ ರಾಜ್ಯದಲ್ಲಿ ತರುವ ವ್ಯವಸ್ಥೆ ಮಾಡಬೇಕು. ಮೂರನೆಯದಾಗಿ, 15 ಜಿಲ್ಲೆಗಳಲ್ಲಿ 350 ಕೋಟಿ ....

ಶ್ರೀ ಎಂ. ವೈ. ಘೋರ್ಪಡೆ : ಅದು ಗೊತ್ತಿದೆ. (ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ : ನಮ್ಮ ಅಭಿಪ್ರಾಯ ಹೇಳಬೇಕೋ ಬೇಡವೋ? ಎಲ್ಲವೂ ನಿಮಗೆ ಗೊತ್ತಿರುತ್ತದೆಯೇ? ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕ ನಿಮ್ಮಂಥ

ಸಾವಿರಾರು ಜನರ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು : ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಈಗ ಮಂತ್ರಿಗಳು ಹೇಳಿಕೆ ಕೊಡುತ್ತಿದ್ದಾರೆ. ಬಡ್ಜೆಟ್ ಮೇಲೆ ಬೇಕಾದಷ್ಟು ಮಾತನಾಡಿ. ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ ಕೇಳಿ ಮೊದಲು.

ಶ್ರೀ ಕೆ. ಹೆಚ್. ಹನುಮೇಗೌಡ : 350 ಕೋಟಿ ರೂಪಾಯಿ ಸ್ಕೀಂ ತರಿಸಿ. ಅವಕಾಶ ಇದೆ. ಮಿನಿ ಸ್ಪೀಚ್‌ಗೆ ಅವಕಾಶ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಅವರು ಹೇಳತಕ್ಕ ಮಾತು ಸರಿ ಇದೆ, ಒಪ್ಪುತ್ತೇನೆ. ಬೋರ್‌ವೆಲ್ ಕರ್ನಾಟಕಕ್ಕೆ ಬಂದಾಗ, 15-20 ಅಡಿಬಾವಿಯಲ್ಲಿ ನೀರು ಸಿಗುವುದಿಲ್ಲವೆಂದು 200-300 ಅಡಿ ಕೆಳಗಿರತಕ್ಕ ನೀರನ್ನು ಮೇಲಕ್ಕೆ ಎತ್ತಲಿಕ್ಕೆ ಪ್ರಾರಂಭ ಮಾಡಿದೆವು. ಈಗ ಏನು ಹೇಳುತ್ತಿದ್ದೇವೆ. ಅದು ಸಾಲದು, 400 ಅಡಿ ಹೋದರೂ ನೀರು ಸಿಗುವುದಿಲ್ಲ ಎಂಬ ಪರಿಸ್ಥಿತಿ ಬಂದಿದೆ. ಅದಕ್ಕೆ ಸ್ಯಾಚ್ಯುರೇಷನ್ ವಿಷಯದಲ್ಲಿ ಸಿಂಧ್ಯ ಅವರು ಏನು ಹೇಳಿದರು, ವಾಟರ್ ಷೆಡ್ ಡೆವಲಪ್‌ಮೆಂಟ್ ಬಗ್ಗೆ ಹನುಮೇಗೌಡರು ಏನು ಹೇಳಿದರು ಅದರಲ್ಲಿ ಅರ್ಥವಿದೆ. ಅದೇ ಮಾತನ್ನು ಹೇಳುತ್ತಿದ್ದೇನೆ, ಸ್ಯಾಚ್ಯುರೇಷನ್ ಕಡೆ ಗಮನ ಕೊಡಬೇಕು, ವಾಟರ್ ಷೆಡ್ ಡೆವಲಪ್‌ಮೆಂಟ್ ಏನಿದೆ ಮತ್ತು ಕುಡಿಯುವ ನೀರಿನ ವಾಟರ್ ಟೇಬಲ್‌ಗೆ ಸಂಬಂಧ ಕಲ್ಪಿಸಬೇಕು. ವಾಟರ್ ಷೆಡ್ ಕೆಲಸ ಒಂದು ಕಡೆ ನಡೆಯುತ್ತದೆ; ಬಾವಿಗಳಲ್ಲಿ ನೀರು ಕಡಿಮೆಯಾಗುವುದು ಇನ್ನೊಂದು ಕಡೆ ನಡೆಯುತ್ತದೆ. ಎಲ್ಲೆಲ್ಲಿ ಪ್ರಾಬ್ಲಂ ಅಕ್ಯೂಟ್ ಆಗಿದೆ ಅಂಥ ಕಡೆ ವಾಟರ್ ಷೆಡ್ ಡೆವಲಪ್‌ಮೆಂಟ್‌ಗೆ ಪ್ರಯಾರಿಟಿ ಕೊಟ್ಟು ಮೇಲ್ಗಡೆಯಿಂದ ಮಳೆ ಹನಿ ಏನು ಸಿಗುತ್ತದೆ ಅದನ್ನು ಸಂಪೂರ್ಣವಾಗಿ ಉಪಯೋಗಿಸುವುದಕ್ಕೆ ವಾಟರ್ ಷೆಡ್ ಡೆವಲಪ್‌ಮೆಂಟ್ ಮಾಡುತ್ತೇವೆ. ವಾಟರ್ ಷೆಡ್ ಡೆವಲಪ್‌ಮೆಂಟಿನಿಂದ ಇಷ್ಟು ವಾಟರ್ ಟೇಬಲ್ ಕಾಪಾಡುವುದಕ್ಕೆ ಸಾಧ್ಯ ಎಂದು ಗೊತ್ತಾದರೆ..

ಶ್ರೀ ಸಿ. ಬೈರೇಗೌಡ : ದಯವಿಟ್ಟು ಅದನ್ನು ಬ್ಯಾನ್ ಮಾಡಿ. ಅದನ್ನು ಬ್ಯಾನ್ ಮಾಡುವುದಕ್ಕೆ ಕಾನೂನು ತನ್ನಿ. ಕುಡಿಯುವ ನೀರಿಗೆ ಏನು ಬೋರ್ ಹಾಕುತ್ತಿದ್ದೀರಿ ಅದನ್ನು ಮಾತ್ರ ಹಾಕಿ.

ಶ್ರೀ ಜೆ. ಸಿ. ಮಾಧುಸ್ವಾಮಿ : ವಾಟರ್ ಷೆಡ್ ಮಾಡುವುದು ಕನ್ಸಂಪ್‌ಷನ್ ಆಫ್ ವಾಟರ್ ಫಾರ್ ಅಗ್ರಿಕಲ್ಚರ್ ಪರ್ಪಸ್. ಗುಡ್ಡಗಾಡು ಪ್ರದೇಶಗಳಲ್ಲಿ ಹಳ್ಳಿಗಳಲ್ಲಿ ಮಾಡುವುದು. ಅದನ್ನು ಇಲ್ಲಿ ಏಕೆ ತರುತ್ತೀರಿ?

ಶ್ರೀ ಎಂ. ವೈ. ಘೋರ್ಪಡೆ : ವಾಟರ್ ಷೆಡ್ ಅಂದರೆ ಅಗ್ರಿಕಲ್ಚರ್‌ಗೆ ಅಲ್ಲ. ನೀರು ಏನು ಹರಿಯುತ್ತಿದೆ ಅದು ಭೂಮಿಯೊಳಗೆ ಹೋದರೆ ಎತ್ತುವುದಕ್ಕೆ ಸಾಧ್ಯವಾಗುತ್ತದೆ. ವಾಟರ್ ಷೆಡ್ ಡೆವಲಪ್‌ಮೆಂಟ್ ಅಂದರೆ, ಲ್ಯಾಂಡ್ ಷೇಪ್ ಕಾನ್‌ಸೆಪ್ಟ್ ಎಲ್ಲಿ ಚೆನ್ನಾಗಿದೆ ಅಲ್ಲಿ. ಇದು ಬರೀ ನೀರಾವರಿಗೆ ಅಲ್ಲ, ಕುಡಿಯುವ ನೀರಿಗೆ ಸಹ ಅನ್ವಯಿಸುವುದಕ್ಕೆ ಸಾಧ್ಯ. ವಾಟರ್ ಟೇಬಲ್ ಕಡಿಮೆಯಾಗುತ್ತಿದೆ...

ಶ್ರೀ ಜೆ. ಸಿ. ಮಾಧುಸ್ವಾಮಿ : ಡೀಸಲ್ಟೀಷನ್ ಪ್ರೋಗ್ರಾಂ ಹಾಕಿಕೊಳ್ಳಬೇಕು.

ಶ್ರೀ ಎಂ. ವೈ. ಘೋರ್ಪಡೆ : ಇದರ ಬಗ್ಗೆ ಯೋಚನೆ ಮಾಡಬೇಕು; ಹೇಗೆ ತಡೆಗಟ್ಟಬೇಕು ಎಂದು. ಮುಖ್ಯವಾದ ವಿಷಯ ಸದನಕ್ಕೆ ಹೇಳದಿದ್ದರೆ ತಪ್ಪಾಗುತ್ತದೆ, ಕುಡಿಯುವ ನೀರಿನ ಯಾವ ಪ್ರಶ್ನೆ ಬಂದರೂ ದಯವಿಟ್ಟು ಈ ಕೆಲವು ವಿಚಾರಗಳ ಮಾಹಿತಿಗಳ ಹಿನ್ನೆಲೆಯಲ್ಲಿ ನೋಡಬೇಕು ತಾವು . ಈಗ ನಮ್ಮ ಕಾರ್ಯಕ್ರಮ ಏನಿದೆ ಅದನ್ನು ಹೇಳಿದ್ದೇವೆ. ಹಾಲಿ ಕರ್ನಾಟಕದಲ್ಲಿ 1 ಲಕ್ಷ 25 ಸಾವಿರ ಬೋರ್ವೆಲ್‌ಗಳು ಇವೆ. ಅದೇ ರೀತಿ ಮಿನಿ ವಾಟರ್ ಸಪ್ಲೈ ಸ್ಕೀಂಗಳು 5849 ಇದ್ದು , ಪೈಪ್ ವಾಟರ್ ಸಪ್ಲೈ ಸ್ಕೀಮ್‌ಗಳು 7,136 ಇವೆ. ಮತ್ತೆ ನಮ್ಮ ಪೋಗ್ರಾಂ ಪ್ರಕಾರ 1992-93ರಲ್ಲಿ 705 ಪೈಪ್ ವಾಟರ್ ಸಪ್ಲೈ. 670 ಮಿನಿ ವಾಟರ್ ಸಪ್ಲೈ , 3,657 ಬೋರ್ವೆಲ್ಸ್‌ಗಳು , ಒಟ್ಟು ಸಂಖ್ಯೆ 5,032 ಇದು ನಮ್ಮ ಈ ವರ್ಷದ ಕಾರ್ಯಕ್ರಮ. ಇದನ್ನು ನಾವು ಸಂಪೂರ್ಣ ಮಾಡುತ್ತೇವೆ. ಮತ್ತೆ 1993-94ಕ್ಕೆ ಪೈಪ್‌ವಾಟರ್ ಸಪ್ಲೈ 780, ಮಿನಿ ವಾಟರ್ ಸಪ್ಲೈ 700 ಹಾಗೂ 4,600 ಬೋರ್ವೆಲ್‌ಗಳು. ಹೀಗೆ 6,080 ಈಗಿರತಕ್ಕ ಕಾರ್ಯಕ್ರಮ. ಅದನ್ನು ಎಷ್ಟು ಜಾಸ್ತಿ ಮಾಡುವುದಕ್ಕೆ ಸಾಧ್ಯ ಅಷ್ಟನ್ನು ಮಾಡುತ್ತೇವೆ. ಇದರಲ್ಲಿ ಹಣದ ಅಭಾವ ನಮಗೆ ಬರುವುದಿಲ್ಲ. ಏಕೆಂದರೆ ಹೋದ ವರ್ಷ 60 ಕೋಟಿ ಇದ್ದರೆ ಈ ವರ್ಷ 108 ಕೋಟಿ ರೂಪಾಯಿ ಬಡ್ಜೆಟಿನಲ್ಲಿ ಪ್ರತ್ಯೇಕವಾಗಿ ಇದಕ್ಕೆ ಇಟ್ಟಿದ್ದೇವೆ. ಇದಕ್ಕೆ ಹಣದ ಅಭಾವ ಇಲ್ಲ. ತೊಂದರೆ ಏನು ಎಂದರೆ, ನೀರು ಹುಡುಕುವುದೇ ತೊಂದರೆ. ಎಲ್ಲಿ ನೀರು ಇಲ್ಲ ಅಂತಹ ಕಡೆ ನೀರು ತರುವುದರಲ್ಲಿ ನಮಗೆ ಕಷ್ಟ ಆಗುವುದಿಲ್ಲ. ಆದರೆ ನೀರನ್ನು ಹುಡುಕುವುದು ಕಷ್ಟ ಇದೆ. ಇದರಲ್ಲಿ ನಾನು ಎಲ್ಲರ ಸಹಕಾರವನ್ನು ಕೇಳುತ್ತಿದ್ದೇನೆ . ಸಣ್ಣ ಹಳ್ಳಿ ಇದ್ದರೂ, 800 ಅಥವಾ ಒಂದು ಸಾವಿರ ಸಂಖ್ಯೆ ಇದ್ದರೂ ಕೂಡ ಅದರ ಬಗ್ಗೆ ನಿರ್ಲಕ್ಷ್ಯ ಮಾಡಬೇಕಾಗಿಲ್ಲ ವಿಶ್ವ ಬ್ಯಾಂಕ್‌ನಿಂದ 380 ಕೋಟಿ ರೂಪಾಯಿ ಕಾರ್ಯಕ್ರಮ, 7 ವರ್ಷಗಳಲ್ಲಿ ಪೂರೈಸುವ ಕಾರ್ಯಕ್ರಮವನ್ನು ನಾವು ಮಾಡುವುದಕ್ಕೆ ಹೊರಟಿದ್ದೇವೆ. ಅದು ಸಣ್ಣ ಸಣ್ಣ ಹಳ್ಳಿಗಳಿಗೆ ಅನುಕೂಲವಾಗುವುದಿಲ್ಲ. ದೊಡ್ಡ ಹಳ್ಳಿಗಳಿಗೆ ಅನುಕೂಲ ಆಗಬಹುದು. ಆ ಕಾರ್ಯಕ್ರಮ ಕೂಡ ಒಪ್ಪಿದ್ದೇವೆ. ಅದೂ ಇರಲಿ, ನಮಗೆ ಅದು ಸಹಕಾರಿಯಾಗುತ್ತದೆ. ಅದರ ಜೊತೆಗೆ ನಮ್ಮ ಸರ್ಕಾರದ ಕಾರ್ಯಕ್ರಮ ಇಂಥ ಪ್ರಾಬ್ಲಮ್ಯಾಟಿಕ್ ಹಳ್ಳಿಗಳಿಗೆ ಹೆಚ್ಚು ಗಮನ ಕೊಟ್ಟು ಅದನ್ನು ಉಪಯೋಗಿಸಿ, ಮತ್ತೆ ನಮ್ಮ ಬಡ್ಜೆಟ್ ಹಣವನ್ನು ಉಪಯೋಗಿಸಿ ಸಮಗ್ರವಾದ ಯೋಜನೆಯನ್ನು ಕರ್ನಾಟಕದಲ್ಲಿ 2 ವರ್ಷಗಳಲ್ಲಿ ಕಾರ್ಯಗತ ಮಾಡುವ ಒಂದು ಆಕ್ಷನ್ ಪ್ಲಾನ್ ತಯಾರು ಮಾಡಬೇಕೆಂದು ನನ್ನ ಉದ್ದೇಶ. ಈಗಾಗಲೇ ಹೇಳಿದ ಪ್ರಕಾರ ಬೋರ್ವೆಲ್ ರಿಪೇರಿ ಬಗ್ಗೆ ನಾವು ಗಮನ ಕೊಡಬೇಕು. ಮೊಬೈಲ್ ಯೂನಿಟ್ಸ್‌ನ್ನು ಪರಿಣಾಮಕಾರಿಯಾಗಿ ಉಪಯೋಗಿಸಬೇಕು. ಬೇಸಿಗೆ ಜಾಸ್ತಿಯಾಗುವುದಕ್ಕಿಂತ ಮುಂಚೆ ಈ ಕಾರ್ಯಕ್ರಮಗಳನ್ನು ಸರ್ಕಾರ ಮಾಡಬೇಕು. ಮುಖ್ಯ ಕಾರ್ಯದರ್ಶಿಗಳು ಮತ್ತು ಅಡ್ಮಿನಿಸ್ಟ್ರೇಟರ್ಸ್ ಬಂದಾಗ ವಿಶೇಷವಾಗಿ ಗಮನ ನಾವು ಖಂಡಿತವಾಗಿ ಇದಕ್ಕೆ ಕೊಡುತ್ತೇವೆ. ಇವರನ್ನು ನಾವು 12 ಹಾಗೂ 13ನೇ ತಾರೀಖು ಕರೆಯಬೇಕೆಂದು ಹೇಳಿದ್ದೆ, ಈಗ ನಾವು ಸ್ವಲ್ಪ ಒಂದು ವಾರ ಮುಂದೆ ಹೋಗಬೇಕಾಗುತ್ತದೆ. ಏಕೆಂದರೆ, ಪಂಚಾಯಿತಿ ರಾಜ್ ಬಿಲ್ ಬಗ್ಗೆ ಸಂಪೂರ್ಣ ಲಕ್ಷ್ಯ ಕೊಟ್ಟು ಆದಷ್ಟು ಬೇಗ ಈ ಸದನದ ಮುಂದೆ ಮಂಡಿಸಬೇಕೆಂದು ವಿಚಾರ ಇರುವುದರಿಂದ, ಇದನ್ನು ಒಂದು ವಾರ ಮುಂದೆ ಹಾಕುತ್ತಿದ್ದೇವೆ. I have stated that regarding the suggestion, to do that, there is no law. Suggestion is that. Some law or some procedure to regulate that to be there. I will certainly

examine that. It is a good suggestion , sooner or later, we have to do that, to avoid water competition by excessive saturation. Similarly, what Mr. Hanumegowda has said regarding watershed development, what is also a good suggestion. We will pay attention to it.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದರು ಔರಾದ್ ತಾಲ್ಲೂಕಿನಲ್ಲಿ ಮೊದಲು 150 ಹಳ್ಳಿಗಳು ಇದ್ದವು. 150 ಹಳ್ಳಿಗಳಲ್ಲಿ 114 ಹಳ್ಳಿಗಳಲ್ಲಿ ಮಿನಿವಾಟರ್ ಸಪ್ಲೈ, ಪೈಪ್‌ವಾಟರ್ ಸಪ್ಲೈ ವ್ಯವಸ್ಥೆಯನ್ನು ಮಾಡಿದ್ದೇವೆಂದು. ನಿಜ, ಯೋಜನೆ ಮಂಜೂರಾಗಿದೆ. ಆದರಲ್ಲಿ 100 ಯೋಜನೆಗಳು ಕಂಪ್ಲೀಟ್ ಆಗಿವೆ, ಕಂಪ್ಲೀಟ್ ಆಗುತ್ತಿವೆ. ಕಂಪ್ಲೀಟ್ ಆಗಿರುವುದರಲ್ಲಿ ಏನಾಗಿದೆ ಅಂದರೆ 30 ಯೋಜನೆಗಳು ಒಣಗಿ ಹೋಗಿವೆ. ನೂರರಲ್ಲಿ ಮೂವತ್ತು ಒಣಗಿವೆ. ಐವತ್ತು ಪ್ಲಸ್ ಮೂವತ್ತು ಒಟ್ಟು ಎಂಭತ್ತು ಹಳ್ಳಿಗಳಲ್ಲಿ ನೀರಿನ ವ್ಯವಸ್ಥೆಯಿಲ್ಲ. ಟ್ಯಾಂಕುಗಳಲ್ಲಿ ನೀರಿಲ್ಲ, ಪೈಪು ವಾಟರ್ ಸ್ಕೀಮ್‌ಗಳಲ್ಲಿ ನೀರಿಲ್ಲ. ಬೋರ್‌ವೆಲ್‌ಗಳು ಒಣಗಿವೆ. ಇಂತಹ ಪರಿಸ್ಥಿತಿಯಲ್ಲಿ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ. ಮಾನ್ಯ ಮಂತ್ರಿಗಳು ಚೆನ್ನಾಗಿ ಹೇಳಿದ್ದಾರೆ ಸಂತೋಷ. ಅಲ್ಲಿನ ಅಧಿಕಾರಿಗಳು ಮಾಹಿತಿಯನ್ನು ಸರಿಯಾಗಿ ಕೊಟ್ಟಿಲ್ಲ. ಬೀದರ್ ಜಿಲ್ಲೆಯ ಔರಾದ್‌ನಲ್ಲಿರತಕ್ಕ ಪ್ರಾಬ್ಲಮ್ ಎಲ್ಲೆಲ್ಲೂ ಇಲ್ಲ. ಯಾವತ್ತೂ ಪ್ರಾಬ್ಲಮ್ ಇದು ಇವತ್ತಿನದಲ್ಲ. ಪದೇ ಪದೇ ವರ್ಷದಲ್ಲಿ ಐದಾರು ತಿಂಗಳು ನೀರೇ ಇರುವುದಿಲ್ಲ. 80 ಹಳ್ಳಿಗಳಲ್ಲಿ ನೀರಿನ ತೊಂದರೆಯಿದೆ. ಜೊತೆಗೆ ತಾಂಡಗಳಲ್ಲಿ, 60 ತಾಂಡಗಳಲ್ಲಿ ನಾಲ್ಕೈದು ಕಿಲೋಮಿಟರ್‌ನಿಂದ ನೀರು ತರುತ್ತಾರೆ. ಅಲ್ಲೊಂದು ವಾಡಿಯೆಂದು ಊರು ಇದೆ. ಅಲ್ಲಿ ಒಬ್ಬ ಹೆಣ್ಣುಮಗಳು ರಾತ್ರಿ ನೀರು ತರಲಿಕ್ಕೆ, ಬಸುರಿ ಹೆಂಗಸು ನೀರು ತರಲಿಕ್ಕೆ ಹೋದಾಗ ದಾರಿ ಮಧ್ಯದಲ್ಲಿ ಹೆರಿಗೆನೋವು ಬಂದು ಡೆಲಿವರಿಯಾಗಿದೆ. ಊರಿನವರೆಲ್ಲ ಹೋಗಿ ಮಂಚದ ಮೇಲೆ ಕೂರಿಸಿಕೊಂಡು ಕರೆದುಕೊಂಡು ಬಂದಿದ್ದಾರೆ. ಇಂತಹ ಪರಿಸ್ಥಿತಿ ಇರುವಾಗ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಿಲ್ಲವೆಂದರೆ ನೀವು ಯಾವ ಕಾಲದಲ್ಲಿ ಮಾಡಬೇಕು? ಇಂತಹ ಪರಿಸ್ಥಿತಿಯಲ್ಲಿ ನಾವು ಅಲ್ಲಿ ಹೋದಾಗ ನಮ್ಮನ್ನುಕೂಡಿ ಹಾಕಿ ನಮಗೆ ಸುತ್ತಲೂ ಘೇರಾವು ಮಾಡುತ್ತಾರೆ. ಔರಾದ್‌ನಲ್ಲಿ ನೀರು ಸಿಗುವುದಿಲ್ಲ ನಿಜ. ಒಂಟೆಗಳ ಮೇಲೆ ನೀರು ತರುತ್ತಾರೆ. ಬೇರೆ ದಾರಿಯೇ ಇಲ್ಲ. ನಾಲ್ಕೈದು ಹಳ್ಳಿಗಳನ್ನು ಸೇರಿಸಿ ವಾಟರ್‌ಸಪ್ಲೈ ಸ್ಕೀಮ್ ಮಾಡಬೇಕೆಂದು ನಾನು ಸಲಹೆ ಕೊಟ್ಟಿದ್ದೇನೆ. ಐದಾರು ಹಳ್ಳಿಗಳನ್ನು ಒಂದು ಕಡೆ ಸೇರಿಸಿ ನಾಲ್ಕೈದು ಕಿಲೋ ಮಿಟರ್‌ಗಳಲ್ಲಿ ನೀರು ಸಿಗುತ್ತದೆ. ಅಲ್ಲಿಂದ ನೀರು ಒದಗಿಸಿಕೊಂಡು ಕಂಬೈಂಡ್ ವಾಟರ್‌ಸಪ್ಲೈ ಸ್ಕೀಮ್ ಮಾಡಬೇಕೆಂದು ಹೇಳುತ್ತೇನೆ. ಮಹಾರಾಷ್ಟ್ರಗಳಲ್ಲಿ ನಮ್ಮ ಪಕ್ಷದ ತಾಲ್ಲೂಕಿನಲ್ಲಿ ಅದೇ ರೀತಿ ಮಾಡಿದ್ದಾರೆ. ಅಲ್ಲೂ ಕೂಡ ಕುಡಿಯುವ ನೀರಿನ ಪ್ರಾಬ್ಲಮ್ ಭಾರಿ ಇತ್ತು. ಅವರು ಕಂಬೈಂಡ್ ವಾಟರ್‌ಸಪ್ಲೈ ಸ್ಕೀಮ್ ಮಾಡಿ ಇವತ್ತು ಪ್ರಾಬ್ಲಮ್ ಮುಗಿಸಿದ್ದಾರೆ. ಐದಾರು ಹಳ್ಳಿಗಳನ್ನು ಒಂದು ಕಡೆ ಸೇರಿಸಿ ಐದಾರು ಕಿಲೋಮಿಟರ್ ದೂರದಿಂದ ನೀರು ತಂದಿದ್ದಾರೆ. ಅಂತಹದ್ದು ನೀವು ಮಾಡಬಹುದು. ಐದಾರು ಕಿಲೋಮಿಟರ್ ಹೋದರೆ ನೀರು ಇದೆ. ಮೂರು ಕಿಲೋಮಿಟರ್‌ನಲ್ಲಿ ನೀರು ಸಿಗುವುದಿಲ್ಲ. ಮೂರ್‍ನಾಲ್ಕು ಹಳ್ಳಿಗಳನ್ನು ಸೇರಿಸಿ ವಾಟರ್‌ಸಪ್ಲೈ ಸ್ಕೀಮ್ ಮಾಡಿ.

SRI. M. Y. GHORPADE : I am prepared to consider the suggestion. There is no problem. I will consider it.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಾಂಡಾಗಳಿಗೆ ನೀರಿಲ್ಲ. ಅಂತಹವುಗಳಿಗೆ ನೀವು ಮಾಡಿದರೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ನೀರು ಸಿಗುವುದಿಲ್ಲ. ಕೆಲವು ಕಡೆಗಳಲ್ಲಿ ಬೋರ್‌ವೆಲ್ ವಾಟರ್‌ಸಪ್ಲೈ ಸ್ಕೀಮ್ ಮಾಡಿದ್ದಾರೆ. ಅವರು ಹೇಳುತ್ತಾರೆ ನಮ್ಮಲ್ಲಿ ದುಡ್ಡಿಲ್ಲ, ಪೈಪು ಯಾರು ಕೊಡಬೇಕು, ಮೋಟಾರು ಯಾರು ಕೊಡಬೇಕು? ಜಿಲ್ಲಾಪರಿಷತ್‌ನವರು ನಮಗೆ ಸಂಬಂಧಪಟ್ಟಿಲ್ಲವೆಂದು ಹೇಳುತ್ತಾರೆ. ಜಿಲ್ಲಾಧಿಕಾರಿಗಳು ನಮಗೂ ಅದಕ್ಕೂ ಸಂಬಂಧವಿಲ್ಲವೆಂದು ಹೇಳುತ್ತಾರೆ. ಯಾರ್‍ಯಾರಿಗೆ ಸಂಬಂಧ ನಮಗೇನು ಗೊತ್ತು?

ಅಧ್ಯಕ್ಷರು : ಮಾನ್ಯ ಗುರುಪಾದಪ್ಪನವರೇ ತಾವು ಬೇಗ ಮುಗಿಸಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಇಷ್ಟೇ ಹೇಳುವುದು, ನಮಗೆ ಬೇಕಾಗಿರುವುದು ನೀರು. ಬಹಳ ಪ್ರಾಬ್ಲಮ್ ಇದೆ. ನೀರಿಗೆ ಬಹಳ ಕಷ್ಟವಾಗಿದೆ. ಮಂತ್ರಿಗಳು ಹೇಳಿದರು 80 ಹಳ್ಳಿಗಳಲ್ಲಿ ನೀರಿಲ್ಲ, 60 ತಾಂಡಗಳಲ್ಲಿ ನೀರಿಲ್ಲ. ತಕ್ಷಣ ಅದರ ಬಗ್ಗೆ ವಿಶೇಷವಾಗಿ ಹಣವನ್ನು ಬಿಡುಗಡೆ ಮಾಡಿ ಐದಾರು ಹಳ್ಳಿಗಳನ್ನು ಸೇರಿಸಿ ನೀರು ಸಿಗುವ ಕಡೆ ವಾಟರ್‌ಸಪ್ಲೈ ಸ್ಕೀಮ್ ಮಾಡಿದರೆ ಹಣವನ್ನು ಇದಕ್ಕೆ ವಿಶೇಷವಾಗಿ ಕೊಡುತ್ತೀರಾ ಹೇಗೆ?

ಶ್ರೀ ಎಂ. ವೈ. ಘೋರ್ಪಡೆ : ಮಾಡೋಣ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಈ ಸಾರಿ ಎಷ್ಟು ಮಿನಿ ವಾಟರ್‌ಸಪ್ಲೈ ಸ್ಕೀಮ್‌ಗಳನ್ನು ಮಾಡುತ್ತೇವೆಂದು ಮಂತ್ರಿಗಳು ಉತ್ತರ ಹೇಳುತ್ತಾ, ಎನ್.ಆರ್.ಡಬ್ಲ್ಯು.ಎಸ್. ಸ್ಕೀಮ್‌ಗಳನ್ನು ಮಾಡುತ್ತೇವೆನ್ನುವ ಮಾತನ್ನು ಹೇಳಿದಾರೆ. ಬೋರ್‌ವೆಲ್ ವಾಟರ್‌ಸಪ್ಲೈ ಸ್ಕೀಮ್‌ಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ನನ್ನದೂ ಸಹ ಕಾಲಿಂಗ್ ಅಟೆನ್‌ಷನ್ ಇತ್ತು. ತಮಗೆ ಗೊತ್ತಿರುವ ಹಾಗೆ ಎನ್.ಆರ್.ಡಬ್ಲ್ಯು.ಎಸ್. ಸ್ಕೀಮ್, ಮಿನಿ ವಾಟರ್‌ಸಪ್ಲೈ ಬೋರ್‌ವೆಲ್ ವಾಟರ್‌ಸಪ್ಲೈ ಗಳಲ್ಲಿ ವಾಟರ್ ಸೋರ್ಸ್ ಡ್ರೈ ಅಪ್ ಆಗಿದೆ ಎನ್ನುವ ಮಾತನ್ನು ಹೇಳಿದ್ದೇನೆ. ಮಾನ್ಯ ಸಿಂಧ್ಯಾರವರು ಹೇಳಿದ ಪ್ರಕಾರ ಬೋರ್‌ವೆಲ್ ವಾಟರ್‌ಸಪ್ಲೈ ಸೋರ್ಸ್ ಡ್ರೈ ಅಪ್ ಆಗುತ್ತಿದೆ. ಎನ್.ಆರ್.ಡಬ್ಲ್ಯು.ಎಸ್. ಸ್ಕೀಮ್ ಸಹ ಡ್ರೈ ಅಪ್ ಆಗುತ್ತಿದೆ. ವಾಟರ್ ಸೋರ್ಸ್ ಎಲ್ಲಿಂದ ತರುತ್ತೀರಿ? ಇದರ ಬಗ್ಗೆ ಬಹಳ ಮುಖ್ಯವಾಗಿ ಯೋಚನೆ ಮಾಡಬೇಕು. ನಮ್ಮಲ್ಲಿಯೂ ಸಹ ಬೋರ್‌ವೆಲ್ ಮಿನಿ ವಾಟರ್‌ಸಪ್ಲೈ ಹಾಗೂ ಪೈಪ್ ವಾಟರ್‌ಸಪ್ಲೈ ಸ್ಕೀಮ್‌ಗಳು ಸಹ ಹಾಗೆಯೇ ಆಗಿದೆ. ನಮ್ಮಲ್ಲಿ ನ್ಯಾಚುರಲ್ ವಾಟರ್ ಸೋರ್ಸ್ ಸಿಗುತ್ತದೆ. ನಮಗೆ ಬೋರ್‌ವೆಲ್ ಸ್ಕೀಮ್ ಬೇಡ. ಇದಕ್ಕೆ ಪಾಪ್ಯುಲೇಷನ್ ನಾರ್ಮ್ಸ್‌ನ್ನು ತೆಗೆದುಹಾಕಬೇಕು. ನಮ್ಮ ಕಡೆಯಲ್ಲಿ ಒಂದು ಹಳ್ಳಿಯಲ್ಲಿ 100 ಜನ 200 ಜನ ಇರುತ್ತಾರೆ. ಬಯಲು ಸೀಮೆಯಲ್ಲಿ ನಿಮಗೆ 1 ಸಾವಿರ 2 ಸಾವಿರ ಜನಸಂಖ್ಯೆ ಇರತಕ್ಕ ಹಳ್ಳಿಗಳು ಸಿಗುತ್ತವೆ. ನಮ್ಮಲ್ಲಿ ಜನಸಂಖ್ಯೆ ಕಡಿಮೆ. ಚಿಕ್ಕಮಗಳೂರು, ಹಾಸನ, ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನ್ಯಾಚುರಲ್ ವಾಟರ್ ಸೋರ್ಸ್ ಸಿಗುತ್ತದೆ. ಅಂತಹ ಕಡೆಗಳಲ್ಲಿ

ಎನ್.ಆರ್.ಡಬ್ಲ್ಯು.ಎಸ್. ಮಿನಿ ವಾಟರ್‌ಸಪ್ಲೈ ಸ್ಕೀಮ್ ಮಾಡಬಹುದು. ಪಾಪ್ಯುಲೇಷನ್ ನಾರ್ಮ್ಸ್‌ನ್ನು ತೆಗೆದುಹಾಕಿ ಒಂದು ವೇಳೆ ನ್ಯಾಚುರಲ್ ವಾಟರ್ ಸೋರ್ಸ್ ಸಿಗದಿದ್ದರೆ ಓಪನ್‌ವೆಲ್‌ಗೆ ಅವಕಾಶ ಮಾಡಿಕೊಡಿ. ಒಂದು ಓಪನ್‌ವೆಲ್ ಮೂಡಬೇಕಾದರೆ 50-60 ಸಾವಿರ ರೂಪಾಯಿ ಬೇಕಾಗುತ್ತದೆ. ಅದಕ್ಕೆ ಹೆಚ್ಚಿನ ಅನುದಾನವನ್ನು ನಮ್ಮ ಕಡೆಗೆ ನೀವು ಕೊಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಡಾ II ಎಸ್. ಬಿ. ನಂಜಪ್ಪ : ಅಧ್ಯಕ್ಷರೇ, ಬೋರ್‌ವೆಲ್ ರಿಪೇರಿ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏನಾಗಿದೆ ಎಂದರೆ, ಮಂಡಲ್ ಪಂಚಾಯತಿಯವರೇ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಬೇಕೆಂದು ಹಿಂದಿನ ವರ್ಷ ಮಂಡಲ್ ಪಂಚಾಯಿತಿಯವರಿಗೆ ಕೊಟ್ಟರು. ಈಗ ಮಂಡಲ್ ಪಂಚಾಯತಿಯಲ್ಲಿ ಏನಾಗಿದೆ ಎಂದರೆ, ಯಾರೋ ಒಬ್ಬರನ್ನು 8 ದಿವಸ ತರಬೇತಿಗೆ ಕಳುಹಿಸುತ್ತಾರೆ. ನಂತರ ಅವರಿಂದ ರಿಪೇರಿ ಮಾಡಿಸುತ್ತಾರೆ. ನನ್ನ ತಾಲ್ಲೂಕಿನಲ್ಲಿ ಸುಮಾರು 50-60 ಬಾವಿಗಳಿಗೆ ರಿಪೇರಿ ಮಾಡುವುದಕ್ಕೆ ಹೋಗಿ ಪೈಪು ಸಹಿತ ಕೆಳಗಡೆ ಬಿಟ್ಟಿರುತ್ತಾರೆ. ಆದುದರಿಂದ ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ಖಾಯಂ ಆಗಿ, ಪ್ರತಿಯೊಂದು ಪಿ.ಹೆಚ್.ಇ.ನಲ್ಲಿರತಕ್ಕ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಕೆಳಗಡೆ ಇರತಕ್ಕ ಅಸಿಸ್ಟೆಂಟ್ ಇಂಜಿನಿಯರ್ He must be in charge of the maintenance of the rural water supply. Under him - ನಿಮ್ಮಲ್ಲಿರತಕ್ಕ ವೆಹಿಕಲ್, ನಿಮ್ಮಲ್ಲಿರತಕ್ಕ ಟೆಕ್ನೀಷಿಯನ್ ಇವರೆಲ್ಲರೂ ವರ್ಕ್ ಮಾಡಬೇಕು. That assignment must be given and responsibility must be fixed. ಇದು ಆದರೆ ಮಾತ್ರ ಗ್ರಾಮಾಂತರ ಪ್ರದೇಶದ ನೀರು ಸರಬರಾಜು ಸರಿ ಹೋಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎರಡನೆಯದು, ನಾವೇನು ಈ ಮಿನಿ ವಾಟರ್ ಮತ್ತು ಮೇಜರ್ ವಾಟರನ್ನು ಪೈಪು ಮೂಲಕ ಕೊಡುತ್ತಿದ್ದೇವೆಯೋ ಅದಕ್ಕೆ, every taluk must have atleast 3 spare pumps. If one pump is burnt immediately he must take this pump. ಅಲ್ಲಿ ಹೋಗಿ ತೆಗೆದುಕೊಂಡು ಬಂದು ರಿವೈಂಡಿಂಗ್‌ಗೆ ಕೊಡಬೇಕು. ಹಾಗಾದರೆ, ನಿಮ್ಮ Water supply can be restored. 2 ತಿಂಗಳಾದರೂ ಕೂಡ 4 ಸಾವಿರ ಜನಸಂಖ್ಯೆ ಇರತಕ್ಕ ಹಳ್ಳಿಗೆ ನೀರು ಸರಬರಾಜು ಇರುವುದಿಲ್ಲ. ಅವರೆಲ್ಲರೂ ಬಂದು ನಮ್ಮ ಪ್ರಾಣ ತಿನ್ನುತ್ತಾರೆ. ಅಲ್ಲಿ ಏನಾಗಿದೆ ಎಂದರೆ, ಒಂದು ಕಡೆ ವಿದ್ಯುಚ್ಛಕ್ತಿ ಇನ್ನೊಂದು ಕಡೆ ಕುಡಿಯುವ ನೀರಿನ ಸಮಸ್ಯೆ. No MLA Can go to his constituency. ಈ ತರಹ ಆಗಿದೆ. ಅದಕ್ಕೋಸ್ಕರ ಕೂಡಲೇ, You must instruct the ZP authorities to take up this. ಈ ಕಾರಣದಿಂದ ರಿಪೇರಿ ಮಾತ್ರ ಮಂಡಲ್ ಪಂಚಾಯಿತಿಯವರಿಗೆ ಕೊಡಬೇಡಿ. 25-30 ಹಳ್ಳಿಗೋಸ್ಕರ ಒಬ್ಬ ಜವಾಬ್ದಾರಿ ವ್ಯಕ್ತಿಯಿಂದ, One responsible person they have to have. You have to have an uniform policy for the entire State .

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಗುರುಪಾದಪ್ಪ ನಾಗಮಾರಪಲ್ಲಿಯವರು ಹೇಳಿದ ಹಾಗೆ, ಬೀದರ್ ಜಿಲ್ಲೆಯಲ್ಲಿ, ಸ್ಪೆಸಿಫಿಕ್ ಆಗಿ ನೀರಿನ ಸಮಸ್ಯೆ ಬಹಳ ಇದೆ. ನಾನು ಎರಡು ದಿನ ಬೀದರ್‌ನಲ್ಲೇ ಇದ್ದೆ. ಜಿಲ್ಲಾಧಿಕಾರಿಗಳ

ಜೊತೆ ಹಾಗೂ ಚೀಫ್ ಇಂಜಿನಿಯರ್ ಜೊತೆ ಮಾತನಾಡಿದ್ದೇನೆ. ನನ್ನ ಮತ ಕ್ಷೇತ್ರದಲ್ಲಿ ಸುಮಾರು 20 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ಅವುಗಳ ಪಟ್ಟಿ ಮಾಡಿಕೊಂಡು ಬಂದಿದ್ದೇನೆ. ನಮ್ಮಲ್ಲಿ ರಿಗ್ ಮಿಷನ್ ಇಲ್ಲ, ರಿಪೇರಿ ಮಾಡುವುದಕ್ಕೆ ನಮ್ಮಲ್ಲಿ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಈ ಪರಿಸ್ಥಿತಿ ಇದೆ. ಶ್ರೀಮಾನ್ ಫೋರ್ಬಡೆ ಸಾಹೇಬರಿಗೆ ಈ ವರ್ಷದ ಬಜೆಟ್‌ನಲ್ಲಿ ಗ್ರಾಮಾಭಿವೃದ್ಧಿ ಸಲುವಾಗಿ ಸಾಕಷ್ಟು ಹಣವನ್ನು ಇಟ್ಟಿದ್ದಾರೆ. ಅದಕ್ಕಾಗಿ, ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ವಾಟರ್ ಸಪ್ಲೈ ಮತ್ತು ಮಿನಿ ವಾಟರ್ ಸಪ್ಲೈ ಸ್ಕೀಂಗಳನ್ನು ಗ್ರಾಮಗಳಲ್ಲಿ ತೆಗೆದುಕೊಳ್ಳುವುದು ಸ್ವಲ್ಪ ತಡವಾಗುತ್ತಿದೆ. ಸದ್ಯಕ್ಕೆ ನೀರಿಗೆ ಬಹಳ ತೊಂದರೆ ಇದೆ. ಇದರ ಹಿಂದೆಯೂ ಕೂಡ ಇದರ ಬಗ್ಗೆ ಚರ್ಚೆಯಾಗಿದೆ. ದಯಮಾಡಿ ಬೀದರ್ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಮಾತನಾಡಿ ನೀರಿನ ಸಮಸ್ಯೆ ಬಗ್ಗೆ ಹಣ ಬಿಡುಗಡೆ ಮಾಡಬೇಕು. ಕೊನೆಯ ಪಕ್ಷ ತಾತ್ಕಾಲಿಕವಾಗಿ, ಜನರಿಗೆ ಅನುಕೂಲ ಮಾಡುವ ದೃಷ್ಟಿಕೋನ ಇಟ್ಟುಕೊಂಡು, ನೀರನ್ನು ಕೊಡುವ ವ್ಯವಸ್ಥೆ ಮಾಡಬೇಕು. ನಿಜವಾಗಿಯೂ ಸಮಸ್ಯೆ ಬಹಳ ಗಂಭೀರವಾಗಿದೆ. ನನ್ನ ಮತಕ್ಷೇತ್ರದಲ್ಲಿ 20-25 ಹಳ್ಳಿಗಳಲ್ಲಿ ಬಹಳ ತೊಂದರೆ ಇದೆ. ತಹಶೀಲ್ದಾರ್ ಮತ್ತು ಎ.ಸಿ. ಯವರನ್ನು ಭೇಟಿ ಮಾಡಿ, ಪಟ್ಟಿ ಕೊಡುತ್ತಿದ್ದೇನೆ. ತಾವು ಪರಿಶೀಲನೆ ಮಾಡಿ, ಇದರ ಬಗ್ಗೆ ಸದ್ಯ ಹಣ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಬೀದರ್ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿ ಮತ್ತು ಜಿಲ್ಲಾಧಿಕಾರಿಗಳ ಜೊತೆ ಮಾತನಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಎಸ್. ಪೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಬೆಳಗಾಂನ ಕೆಲವು ವರ್ಕ್ಸ್ ಬಜೆಟ್‌ನಲ್ಲಿ ಸೇರಿವೆ. ಅಲ್ಲಿ ಜನಸಂಖ್ಯೆ ಕಡಿಮೆ ಇದೆಯೆಂದು, ಟೆಕ್ನಿಕಲ್ ಸ್ಯಾಂಕ್ಷನ್ ಎಸ್. ಇ. ಕೊಡಬಾರದೆಂದು ಹೇಳುತ್ತಾರೆ. 600 -700 ಜನಸಂಖ್ಯೆ ಇದೆ. ಇಲ್ಲಿ ಮಿನಿ ವಾಟರ್ ಸಪ್ಲೈ ಬೇಕು. ಟ್ಯಾಪ್ ವಾಟರ್ ಸಪ್ಲೈ ಆಗಬೇಕೆಂದು ಅವರು ಕೇಳುತ್ತಿದ್ದಾರೆ. The works which are appearing in the budget, he is not at all giving the Technical sanction. For want of technical sanction, the works are held up. ಎರಡು ಮೂರು ಸಲ ಹೇಳಿದ್ದಾರೆ. 500-600 ಜನಸಂಖ್ಯೆ ಇದ್ದು 4-4 ಕಿಲೋಮಿಟರ್ ಹೋಗುತ್ತಾರೆ. ಚಿಕ್ಕಬೂದನೂರು ಮತ್ತು ಕುಟರನಟ್ಟಿ works are appearing in the Budget. ಬಜೆಟ್‌ನಲ್ಲಿ ಅದರೂ ಕೂಡ ಇವತ್ತಿನವರೆಗೆ ಆಗಿಲ್ಲ. ಅವರ ಆಫೀಸಿನಲ್ಲಿ ಸಾಕಷ್ಟು ಸಲ ಎಡತಾಕಿದರೂ ಸಹ ಜೆ.ಇ. ಸಿಕ್ಕುತ್ತಾ ಇಲ್ಲ. ಅಲ್ಲಿ ಟೆಕ್ನಿಕಲ್ ಸ್ಯಾಂಕ್ಷನ್ ಕೊಡುವಂಥ ಟಿ.ಎ. ಇರುತ್ತಾನೆ, ಅವರನ್ನು ಕೇಳಿ, ಎಲ್ಲಾ ದೂರುಗಳನ್ನು ಕೊಟ್ಟು ಬಂದರೂ ಸಹಿತ ಕೊಡುವುದಕ್ಕೆ ತಯಾರಿಲ್ಲ. In spite of doing all compliance, the Superintending Engineer is not giving technical sanction. ಇವತ್ತಿನ ದಿವಸ ಬೆಳಗಾವಿಯಲ್ಲಿ ಎಸ್.ಇ.ಯಿಂದ ಇಟ್ಟಿದ್ದ ನೀರಾವರಿ ಹಣ ಎಲ್ಲಾ ಹಾಳಾಗುತ್ತಿದೆ. ದಯಮಾಡಿ, ತಾವು ಇದರ ಸಲುವಾಗಿ ಆಸಕ್ತಿ ತೆಗೆದುಕೊಂಡು, ಅಪ್ರೂವಲ್ ಆದ ಕೆಲಸಗಳಿಗೆ ಟೆಕ್ನಿಕಲ್ ಸ್ಯಾಂಕ್ಷನ್ ಕೊಡಬೇಕು.

ಅಧ್ಯಕ್ಷರು : ಸಾಕಷ್ಟು ವಿವರ ಕೊಟ್ಟಿದ್ದಾರೆ. ಪ್ರತಿಯೊಂದು ಕ್ಷೇತ್ರದ ಬಗ್ಗೆ ಹೇಳುತ್ತಾ ಹೋದರೆ ಎಷ್ಟು ಸಮಯ ಬೇಕಾಗುತ್ತದೆ. ಅವರು ಏನು ಹೇಳುತ್ತಾರೋ ಅದನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಬಿ. ಎಚ್. ಬನ್ನಿಕೋಡ್ : ಬೋರ್‌ವೆಲ್‌ಗಳು ಏನು ಕೊಟ್ಟಿದ್ದಾರೆ ತಾವು ಹೇಳುವಂತೆ ಸಮಗ್ರವಾಗಿ ತೆಗೆದುಕೊಳ್ಳಬೇಕೆನ್ನುವ ವಿಚಾರ ಇಟ್ಟುಕೊಂಡಿದ್ದೀರಿ. ಅಲ್ಲಿರತಕ್ಕಂಥ ಸಮಸ್ಯೆ ಏನೆಂದರೆ ನಮ್ಮಲ್ಲಿ ಕೈ ಪಂಪುಗಳು ಏನಿವೆ ಕೈ ಬೋರ್ ಮೇಲಿಂದ ಮೇಲೆ ಬಿದ್ದು ಹೋಗುತ್ತಿರುತ್ತವೆ. ಅದಕ್ಕೆ ಮೇನ್‌ಟೆನೆನ್ಸ್‌ಗಾಗಿ ಅತ್ಯಲ್ಪ ಹಣ ಕೊಡುತ್ತೀರಿ. ಆ ಹಣದಿಂದ ರಿಪೇರಿ ಮಾಡಲಿಕ್ಕೆ ಸಾಧ್ಯವಿಲ್ಲ. ಪೈಪುಗಳು ಹಾಕಿ ಬೋರ್‌ವೆಲ್‌ಗಳು ಹಾಕುತ್ತೀರಿ ಆಮೇಲೆ ಅವು ಬಿದ್ದು ಹೋದರೆ ಸರಿ ಮಾಡಲು 4-5 ದಿವಸ ಬೇಕು. ಬೇರೆ ಕೈ ಪಂಪ್ ಕೊಡುವ ವ್ಯವಸ್ಥೆ ಮಾಡಬೇಕು. ಇದಕ್ಕೆ ಜವಾಬ್ದಾರಿ ಮಂಡಲ ಪಂಚಾಯತಿಯದು ಅಲ್ಲ. ಜಿಲ್ಲಾ ಪರಿಷತ್ತುದ್ದು ಇಲ್ಲ ನಿರ್ವಹಣಾ ವೆಚ್ಚ ಹೆಚ್ಚು ಮಾಡಬೇಕು. ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಮಾಡಲು ಹೆಚ್ಚು ಬೋರ್‌ವೆಲ್ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು : ಸಭೆಯು ಈಗ ಮುಂದೂಡಲ್ಪಟ್ಟು ಮತ್ತೆ 2 ಗಂಟೆಗೆ ಸೇರುವುದು.

(ಸದನವು ಮತ್ತೆ 2.45ಕ್ಕೆ ಸಮಾವೇಶಗೊಂಡಿತು.)
(ಅಧ್ಯಕ್ಷರು - ಶ್ರೀ ವಿ. ಎಸ್. ಕೌಜಲಗಿ ಅವರು, ಅಧ್ಯಕ್ಷ ಪೀಠದಲ್ಲಿದ್ದರು)

ಶ್ರೀ ಪಿ.ಜಿ. ಆರ್.ಸಿಂಧ್ಯ : ಅಧ್ಯಕ್ಷರೇ, ನಮ್ಮನ್ನು ಕರೆಯಿಸಿ ಮಾತನಾಡುತ್ತೇನೆಂದು ಹೇಳಿದಿರಿ.

ಅಧ್ಯಕ್ಷರು : ಆಯಿತು.

ಶ್ರೀ ಸಿ. ಬೈರೇಗೌಡ : ಮುಖ್ಯ ಮಂತ್ರಿಗಳು ಡೆಲ್ಲಿಗೆ ಹೋಗುತ್ತಿದ್ದಾರೆ. ನಮ್ಮ ಕಾರ್ಯಕ್ರಮದ ಪ್ರಕಾರ, ಮುಖ್ಯಮಂತ್ರಿಗಳು ಇಲ್ಲದೇ, ಈ ವಿಚಾರವನ್ನು ಪ್ರಸ್ತಾಪ ಮಾಡುವುದು ಕಷ್ಟ.

ಅಧ್ಯಕ್ಷರು : ಇನ್ನು 5 ನಿಮಿಷದಲ್ಲಿ ತಮ್ಮನ್ನು ನನ್ನ ಚೇಂಬರಿಗೆ ಕರೆಯಿಸುತ್ತೇನೆ.

2. ಗಮನ ಸೆಳೆಯುವ ಸೂಚನೆಗಳು

ವಿಷಯ : ಹಾಸನ ಪಟ್ಟಣದಲ್ಲಿ ಕಾನೂನುಬಾಹಿರವಾಗಿ ಮದ್ಯದಂಗಡಿ ಮತ್ತು ಬಾರ್‌ಗಳಿಗೆ ಲೈಸೆನ್ಸ್ ನೀಡಿರುವುದು.

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಸನ್ಮಾನ್ಯ ಅಧ್ಯಕ್ಷರೇ, ಹಾಸನ ಪಟ್ಟಣದಲ್ಲಿ ಕಾನೂನು ಬಾಹಿರವಾಗಿ, ಮದ್ಯದಂಗಡಿ ಮತ್ತು ಬಾರ್‌ಗಳಿಗೆ ಹೆಚ್ಚಿನ ಲೈಸೆನ್ಸ್ ನೀಡಿರುವುದರಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

* ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ,